ಶ್ರೀ ಅಜೀಜ್ ಸೇತ್ : ನಿಧಾನ ಮಾಡಿರುವುದಕ್ಕೆ ಕಾರಣವೇನು ಎಂದು ಹೇಳುವುದಕ್ಕೆ ಬರುವುದಿಲ್ಲ. ಈ ವಿಷಯವನ್ನು ನನ್ನ ಗಮನಕ್ಕೆ ತೆಗೆದುಕೊಂಡು ಬಂದಿದ್ದಾರೆ. ಅಲ್ಲಿ ಸುಮಾರು 23 Non-stop buses are exclusively operated between Bangalore and Tumkar, I felt it necessary to have a separate platform at Bangalore Bus station. That will be done.

ಶ್ರೀ ಕೆ. ಲಕ್ಕಪ್ಪ : ನನಗೆ ಕೇಳಿಸಲಿಲ್ಲ. ದಯವಿಟ್ಟು ಮತ್ತೊಮ್ಮೆ ಹೇಳಿ.
SRI AZEEZ SAIT : Separate platform will be arranged. It will be done.

MR. SPEAKER : It will be done.

ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ

110 - ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ?

ಅ) ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಲಕ್ಷಾಂತರ ರೂಪಾಯಿಗಳ ಅವ್ಯವಹಾರ ನಡೆದಿರುವ ಬಗ್ಗೆ ಕರ್ನಾಟಕ ಮಹಾಲೆಕ್ಕ ಪರಿಶೋಧಕರು ವರದಿಯೊಂದನ್ನು ಇತ್ತೀಚೆಗೆ ಸರ್ಕಾರಕ್ಕೆ ಸಲ್ಲಿಸಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಶ್ರೀ ಹೆಚ್.ಎಂ. ರೇವಣ್ಣ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ವರದಿ ಸಲ್ಲಿಸಿಲ್ಲವೆಂದು ಹೇಳಿದ್ದಾರೆ. ಆದರೆ ಇಲ್ಲಿ ನಮ್ಮ ಹತ್ತಿರ ಇರತಕ್ಕಂಥ ಮಾಹಿತಿ ಪ್ರಕಾರ ಲಕ್ಷಾಂತರ ರೂಪಾಯಿ ಅವ್ಯವಹಾರ ನಡೆದಿರುವುದು ಗೊತ್ತಾಗುತ್ತದೆ. ಒಂದೆರಡು ವಿಷಯಗಳನ್ನು ತಮಗೆ ತಿಳಿಸಬೇಕೆಂದು ಇಚ್ಛಿಪಡುತ್ತೇನೆ. ಚಿಂತಾಮಣಿಯ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಪ್ರಯೋಗಶಾಲೆಗೆ ಉಪಕರಣಗಳನ್ನು ಕೊಂಡುಕೊಂಡಿರತಕ್ಕಂಥ ಮಾಹಿತಿ ಈ ರೀತಿ ಇದೆ. ಮಲ್ಟಿಮೀಟರ್ ಡೆಮಾನ್ಸ್ಟ್ರೇಷನ್ ಪೈಪ್ ಎರಡು. ಪ್ರಾಂಶುಪಾಲರ ರಸೀತಿ ಇರುವುದು 3,450 ರೂಪಾಯಿಗಳಿಗೆ, ಇವರ ಬೆಲೆ ಇರುವುದು 450 ರೂಪಾಯಿಗಳು. ವ್ಯತ್ಯಾಸ 3000 ರೂಪಾಯಿಗಳು, ಇದೇ ರೀತಿ 10 ಹೆಚ್‌ಪಿ ಪಂಪುಸೆಟ್ಟಿಗೆ 32,800 ರೂಪಾಯಿಗಳ ಬೆಲೆ ತೋರಿಸಿದ್ದಾರೆ. ಇದರ ಬೆಲೆ ಇರುವುದು 5,800 ರೂಪಾಯಿಗಳು. ಇಂತಹ ಅನೇಕ ಪ್ರಕರಣಗಳಿವೆ. ದಯವಿಟ್ಟು ಇದರ ಬಗ್ಗೆ ಸಿ.ಒ.ಡಿ. ತನಿಖೆ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ಏನು ಹೇಳುತ್ತೀರಿ?

ಶ್ರೀ ಎಂ. ವೀರಪ್ಪ ಮೊಯಿಲಿ : ಈ ಪ್ರಶ್ನೆ ಮತ್ತು ಉತ್ತರ ಸ್ವಲ್ಪ ತಾಂತ್ರಿಕವಾಗಿದೆ. ಏಕೆಂದರೆ, ಮಹಾ ಲೆಕ್ಕಪರಿಶೋಧಕರು ಇತ್ತೀಚೆಗೆ ವರದಿಯನ್ನು ಸಲ್ಲಿಸಿರುವುದು ನಿಜವೇ ಎಂದು ಕೇಳಿದ್ದಕ್ಕೆ 'ಇಲ್ಲ' ಎಂದು ಹೇಳಬೇಕಾಯಿತು. ವರದಿ ಇನ್ನೂ ಬಂದಿಲ್ಲ ಮತ್ತು ನಾವು ಅದನ್ನು ಕಾಯುತ್ತಿದ್ದೇವೆ. ಆದರೆ ಎ.ಜಿ.ಯವರು ಒಂದು ಲೆಕ್ಕಪರಿಶೋಧನೆಯನ್ನು ವಿಶೇಷವಾಗಿ ಈ ತಾಂತ್ರಿಕ ನಿರ್ದೇಶನಾಲಯದ ಬಗ್ಗೆ ಕೈಗೊಂಡಿದ್ದಾರೆ. 1986-87ರಿಂದ 1989-90ರವರೆಗೆ ಈ ರೀತಿ ಒಂದು ಲೆಕ್ಕಪರಿಶೋಧನೆ ಮಾಡಿದಾಗ ಸುಮಾರು 1ಲಕ್ಷ 36 ಸಾವಿರದ 440ರೂಪಾಯಿಗಳ ದುರುಪಯೋಗ ಇದರಲ್ಲಿ ಇದ್ದದ್ದು ಕಂಡುಬಂದಿದೆ. ಆ ವರದಿ ಬಂದಿಲ್ಲ. ಈ ವಿಚಾರವನ್ನು ಕಂಡು

ಓದಿದ ಕೂಡಲೇ ಇದಕ್ಕೆ ಸಂಬಂಧಪಟ್ಟ ಒಬ್ಬರು ಕ್ಯಾಷಿಯರ್ ಇದರಲ್ಲಿ ಒಳಗಾಗಿದ್ದಾರೆ ಎಂದು ಮೇಲ್ನೋಟಕ್ಕೆ ಕಂಡುಬಂದಕೂಡಲೇ ಆ ಕ್ಯಾಷಿಯರ್ ಅನ್ನು ಜೂನ್ 1990ರಲ್ಲಿ ಅಮಾನತ್ತಿನಲ್ಲಿಡಲಾಗಿದೆ. ಮತ್ತು ಈ ಬಗ್ಗೆ ಒಂದು ಇಲಾಖಾ ತನಿಖೆಯನ್ನು ಕೂಡ ನೇಮಕ ಮಾಡಲಾಗಿದೆ. ಮಹಾ ಲೆಕ್ಕಪರಿಶೋಧಕರ ವರದಿಯನ್ನು ತಾಪು ಕಾಯುತ್ತಿದ್ದೇವೆ. ಈ ವರದಿ ಬಂದ ಮೇಲೆ ಇನ್ನೂ ಬೇರೆ ಯಾರಾದರೂ ಸಂಬಂಧಪಟ್ಟಿದ್ದರೆ ಅವರ ಬಗ್ಗೆ ನಾವು ಉಗ್ರವಾದ ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತು ಇದು ಸಾಲದೇ ಇದ್ದರೆ, ತನಿಖೆಯಿಂದ ಸರಿಯಾದ ಮಾಹಿತಿ ಸಿಗದೇ ಇದರೆ ತಾಪು ಹೇಳಿದ ಪ್ರಕಾರ ಸಿ.ಐ.ಡಿ.ಗೆ ಕೊಡಲಿಕ್ಕೆ ಅಸುಕೂಲವಾಗುತ್ತದೆ. ಮಹಾ ಲೆಕ್ಕಪರಿಶೋಧಕರ ವರದಿ ಬಾರದೆ ಇದರೆ ನಾವು ಸಿ.ಐ.ಡಿ. ಗೆ ಕೊಡಲಿಕ್ಕೆ ಬರುವುದಿಲ್ಲ. ಇದರಿಂದ ಮುಂದಿನ ತನಿಖೆಗೆ ಅಷ್ಟು ಅನುಕೂಲವಾಗುವುದಿಲ್ಲ. ನಮಗೆ ತಿಳಿದುಬಂದಂತೆ ಇಲ್ಲಿಯವರೆಗೆ ವರದಿಯನ್ನು ಪರಿಶೀಲನೆ ಮಾಡಿದೆ. ಮಹಾ ಲೆಕ್ಕ ಪರಿಶೋಧಕರ ವರದಿ ಬಾರದೆ ಇದ್ದರೆ ನಾವು ಸಿ.ಐ.ಡಿ.ಗೆ ಕೊಡಲಿಕ್ಕೆ ಬರುವುದಿಲ್ಲ. ಇದರಿಂದ ಮುಂದಿನ ತನಿಖೆಗೆ ಅಷ್ಟು ಅನುಕೂಲವಾಗುವುದಿಲ್ಲ. ನಮಗೆ ತಿಳಿದುಬಂದಂತೆ ಇಲ್ಲಿಯವರೆಗೆ ವರದಿಯನ್ನು ಪರಿಶೀಲನೆ ಮಾಡಿದೆ. ಮಹಾಲೆಕ್ಕಾ ಪರಿಶೋಧಕರಿಗೆ ಈಗಾಗಲೇ ಮರುಸೂಚನೆಯನ್ನು ಕಳಿಸಿದ್ದೇವೆ. ನಮಗೆ ತಿಳಿದುಬಂದಂತೆ 1986ನೇ ಇಸವಿಯಿಂದ ಮಾರ್ಚ್ ಅಥವಾ ಜೂನ್ 1990ರವರೆಗೆ 10ಲಕ್ಷ ರೂಪಾಯಿಗಳವರೆಗೆ ಅವ್ಯವಹಾರ, ದುರುಪಯೋಗ ನಡೆದಿರಬಹುದು. ಎಂದು ಮೇಲ್ನೋಟಕ್ಕೆ ಕಂಡುಬಂದಿದೆ. ನಾವು ಈ ವರದಿಯನ್ನ ಕಾಯುತ್ತಿದ್ದೇನೆ. ಇದರಲ್ಲಿ ಯಾರು ತಪ್ಪಿತಸ್ಥರು ಇದ್ದಾರೆ. ಅವರಲ್ಲಿ ಯಾರನ್ನೂ ಕೂಡ ನಾವು ಬಿಡುವುದಿಲ್ಲ, ಅವರ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತೇನೆ.

ಪ್ರೊ. ಎಂ.ವಿ. ನಂಜುಂಡಸ್ವಾಮಿ : ಮಾನ್ಯ ಶಿಕ್ಷಣ ಸಚಿವರು ಬರೀ ಲೆಕ್ಕಾಧಿಕಾರಿ ಅಥವಾ ಕ್ಯಾಷಿಯರ್ ಹೆಸರು ಹೇಳುತ್ತಿದ್ದಾರೆ. ನನ್ನ ಹತ್ತಿರ ಇರತಕ್ಕ ಮಾಹಿತಿ ಪ್ರಕಾರ, ಅವರೊಬ್ಬರನ್ನು ಅಮಾನತ್ತಿನಲ್ಲಿಟ್ಟರೆ ಸಾಲದು. ಏರೀದಿ ಮಾಡಿದ ಪಟ್ಟಿ ನನ್ನ ಹತ್ತಿರ ಇದೆ. ಎಲ್ಲಿಂದ ಏರೀದಿ ಮಾಡಿದರು. ಅದರ ಇನ್‌ವಾಯ್ಸ್ ನನ್ನನ ಹತ್ತಿರ ಇದೆ. ಒಂದು ಹೆಚ್.ಪಿ. ಮೋಟಾರು ಪಂಪಿಗೆ ಪಾವತಿ ಮಾಡಿರುವುದು 36ಸಾವಿರ ರೂಪಾಯಿ, ಮಾರ್ಕೆಟ್ ಬೆಲೆ ಇರುವುದು ಹಾಗೂ ಎಂ.ಎಸ್. ರಾಮಯ್ಯ ಕಾಲೇಜಿನವರು ತೆಗೆದುಕೊಂಡಿರುವುದು 6 ಸಾವಿರ ರೂಪಾಯಿ. Liquid extraction column ಪಾವತಿ ಮಾಡಿರುವುದು 40 ಸಾವಿರ ರೂಪಾಯಿಗಳು ಅದರ ಬೆಲೆ 15 ಸಾವಿರ ರೂಪಾಯಿ ಇದೆ. Tube heat exchanger 24 ಸಾವಿರ ರೂಪಾಯಿಗಳನ್ನು ಪಾವತಿ ಮಾಡಿರುತ್ತಾರೆ. ಮಾರ್ಕೆಂಟು ಬೆಲೆ ಒಂಭತ್ತೊಕ್ಕಾಲು ಸಾವಿರ ರೂಪಾಯಿ ಇದೆ. leak filterಗೆ 20 ಸಾವಿರ ರೂಪಿಯಿಗಳನ್ನು ಕೊಟ್ಟಿದ್ದಾರೆ. ಅದರ ಬೆಲೆ 7,300 ರೂಪಾಯಿ ಇದೆ ಹೀಗೆ, ಇವರಲ್ಲಿ ಬರೀ ಲೆಕ್ಕಾಧಿಕಾರಿಯಲ್ಲ, ನಾನು ಬೇರೆ ಯವರ ಹೆಸರು ಪತಕ್ಕೋಸ್ಕರ ಹೇಳುತ್ತಿದ್ದೇನೆಂದರೆ, ಇವರಲ್ಲಿ ಕೈವಾಡ ಇರುವುದು ಜಿ.ಹೆಚ್. ಕೃಷ್ಣ ಮೂರ್ತಿ, ಎಂ. ನಾಗರಾಜರಾವ್ ಮತ್ತು ಕೆ.ವಿ. ನಂಜುಂಡೇಗೌಡ-ಇವರನ್ನು ಕೂಡಲೇ ಅಮಾನತ್ತಿನಲ್ಲಿಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಒಂದು ವೇಳೆ ನಿವೃತ್ತಿಯಾಗಿದ್ದರೂ ಇವರ ಆಸ್ತಿಪಾಸ್ತಿಯನ್ನು ಮುಟ್ಟುಗೋಲು ಹಾಕಬೇಕಾಗುತ್ತದೆ. ಇಷ್ಟು ಮಾಹಿತಿ ನನ್ನ ಹತ್ತಿರ ಇದೆ. ವರ್ಲ್ಡ್ ಬ್ಯಾಂಕ್ ಕಾರ್ಯಕ್ರಮದಲ್ಲಿ ಇರುವ ಕೈಗೆ 50 ಕೋಟಿ ರೂಪಾಯಿಗಳನ್ನು ಕೊಟ್ಟಿದೀರಿ, ಇದು ದುರುಪಯೋಗವಾಗಬಾರದು ಎನ್ನುವ ದೃಷ್ಟಿಯಿಂದ ಒತ್ತಾಯ ಮಾಡುತ್ತಿದ್ದೇನೆ. ಇವರ ಬಗ್ಗೆ ಕೂಡಲೇ ಸಿ.ಐ.ಡಿ. ತನಿಖೆ ಮಾಡಿ, ಇವರನ್ನು ಅಮಾನತ್ತಿನಲ್ಲಿಟ್ಟು ಈ 50 ಕೋಟಿ ರೂಪಾಯಿಗಳನ್ನು ಉಳಿಸುತ್ತೀರಾ, ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ಏನು ಅವ್ಯವಹಾರ ಅಥವಾ ದುರುಪಯೋಗ ನಡದಿದೆ 75 ಲಕ್ಷ ರೂಪಾಯಿಗಳ ವ್ಯವಹಾರದಲ್ಲಿ ಮೇಲ್ನೋಟಕ್ಕೆ ಸುಮಾರು 10 ಲಕ್ಷ ರೂಪಾಯಿಗಳ ದುರುಪಯೋಗವಾಗಿರಬಹುದು. ಮೇಲ್ನೋಟದ ವರದಿ ಪ್ರಕಾರ ೧೦ ಲಕ್ಷ ರೂಪಾಯಿಗಳ ದುರುಪಯೋಗ ಆಗಿರಬಹುದೆಂದು ನಮಗೆ ಒಂದು ಗುಮಾನಿ ಬಂದಿದೆ. ಹಾಲಿ ಆಗಿರುವ ತನಿಖೆಯಿಂದ ಇದು ಗೊತ್ತಾಗಿದೆ. ಇದರ ಬಗ್ಗೆ ಸಿ.ಐ.ಡಿ. ತನಿಖೆ ಮಾಡಿರಿ ಎಂದು ಹೇಳಿದರೆ ಈ ಬಗ್ಗೆ ಎರಡು ದಿವಸದೊಳಗಾಗಿ ಅಂದರೆ ಸೋಮವಾರ ಅಥವಾ ಮಂಗಳವಾರ ಏನು ಕ್ರಮ ತೆಗೆದುಕೊಳ್ಳುತ್ತೇನೆ. I will convey to the Assembly.

ಪ್ರೊ. ಎಂ.ಡಿ. ನಂಜುಂಡ ಸ್ವಾಮಿ : ಇದರಲ್ಲಿ ಹಣಕಾಸಿನ ಅವ್ಯವಹಾರ ನಡೆದಿರುವುದು ಅಷ್ಟೇ ಅಲ್ಲ, ಪರೀಕ್ಷೆಗೆ ಕುಳಿತಿರತಕ್ಕ ವಿದ್ಯಾರ್ಥಿಗಳಿಗೂ ಬೇರೆ ಬೇರೆ ಮಾರ್ಕ್ಸ್ ಕಾರ್ಡ್‌ಗಳನ್ನು ಕೊಟ್ಟಿರುವಂಥ, ಬೇರೆ ಬೇರೆ ಮಾರ್ಕ್ಸ್ ಕಾಡುಗಳು ನನ್ನ ಹತ್ತಿರ ಇವೆ. ಈ ವಿಷಯದ ಬಗ್ಗೆ ಈ ಮೂರು ಜನರನ್ನು ತಕ್ಷಣ ಅಮಾನತ್ತಿನಲ್ಲಿಡಬೇಕು. ಅದರಲ್ಲಿ ನಿವೃತ್ತಿ ಆದವರನ್ನು ಅನಂತರ ಜೈಲಿಗೆ ಕಳುಹಿಸೋಣ.

ಶ್ರೀ ಎಂ. ವೀರಪ್ಪ ಮೊಯ್ಲಿ : ಏನು ಕ್ರಮ ತೆಗೆದುಕೊಂಡಿದ್ದೇನೆ ಎಂಬುದನ್ನು ಮಂಗಳವಾರ ಈ ಸದನಕ್ಕೆ ವರದಿ ಕೊಡುತ್ತೇನೆ.

ಶ್ರೀ ಹೆಚ್. ವಿಶ್ವನಾಥಯ್ಯ : ಇನ್ನೂ ಮುಂದಕ್ಕೆ ಏನಾಗಿದೆ ಎಂದು ಹೇಳಿದನೆ, ಈ ಒಂದು ವಿಭಾಗದಲ್ಲಿ ಕೇವಲ ಇಷ್ಟೇ ಹಣ ದುರುಪಯೋಗ ಆಗಿದೆಯೆಂದು ಇತ್ತೀಚಿನ ಸ್ಪೆಷಲ್ ಆಡಿಟ್‌ರಿಂದ ವರದಿ ಸರ್ಕಾರಕ್ಕೆ ಈಗಾಗಲೇ ಬಂದಿದೆ. ಸರ್ಕಾರಕ್ಕೆ ಇದರ ಬಗ್ಗೆ ವರದಿ ಬಂದಿಲ್ಲವೇ? ಅಕೌಂಟೆಂಟ್ ಜನರಲ್‌ರವರ ಆಫೀಸಿನಿಂದ ಮೊದಲು ಆಡಿಟ್ ತನಿಖೆಯಾಯಿತು. ಈ ತನಿಖಾ ವರದಿಯನ್ನು ಕೊಟ್ಟಿಲ್ಲವೇ? ಅಕೌಂಟೆಂಟ್ ಜನರಲ್‌ರವರ ಅಂತಿಮವಾಗಿ ಬರುವುದಿಲ್ಲ, ಇದಕ್ಕಿಂತ ಮೊದಲೇ ತಮಗೆ ಬಂದಿದೆ. ಅದರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಇತ್ತೀಚಿನ ದಿನಗಳಲ್ಲಿ ಈ ಅವ್ಯವಹಾರ ನಡೆದಿದೆ ಎಂದಲ್ಲ, ಎ.ಸಿ.ಬಿಲ್. ಮತ್ತು ಎಸ್.ಡಿ.ಸಿ.ಬಿಲ್ ಗಳಲ್ಲೂ ಲಕ್ಷಾಂತರ ರೂಪಾಯಿಗಳ ಅವ್ಯವಹಾರ ಆಗಿದೆಯೆಂದು ಈಗಾಗಲೇ ಹೇಳಿದ್ದಾರೆ, ಇದಕ್ಕಿಂತ ಹೆಚ್ಚಾಗಿ, ದುರದೃಷ್ಟಕರ ಘಟನೆ ಎಂದರೆ, ತಾವು ಪ್ರವೇಶ ಪರೀಕ್ಷೆ ಮಾಡಿಸುತ್ತೀರಿ, 60-65 ರೂಪಾಯಿಗಳನ್ನು ತಾವು ವಸೂಲ್ಮಾಡುತ್ತೀರಿ, ಈ ರೀತಿಯಾಗಿ ಲಕ್ಷಾಂತರ ರೂಪಾಯಿಗಳನ್ನು ವಸೂಲ್ಮಾಡುತ್ತೀರಿ, ಇದನ್ನು ಆಡಿಟ್ ಮಾಡಬೇಕೆಂದು ಎ.ಜಿ. ಯವರು ಕೇಳಿದರೆ, ತಮ್ಮ ಸರ್ಕಾರದಲ್ಲಿರತಕ್ಕ ಅಧಿಕಾರಿಗಳು ಹೇಳುತ್ತಾರೆ, ಸಾಧ್ಯವಿಲ್ಲ ಹೇಗೆ ಬೇಕಾದರೂ ವಿಚ್ಚುಮಾಡಬಹುದೆಂದು ಪತ್ರ ಬರೆದಿದ್ದಾರೆ, ಇದನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ, ಆಡಿಟ್ ಮಾಡುವುದಕ್ಕೆ ಲೆಕ್ಕ ಪುಸ್ತಕಗಳನ್ನು ಕೊಡದಿರುವಂಥ ಹೇಳಿಕೆಯನ್ನು ಸಂಬಂಧಪಟ್ಟ ಅಧಿಕಾರಿಗಳು ಹೇಳುತ್ತಾರೆ, ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ, ಲಕ್ಷಾಂತರ ರೂಪಾಯಿಗಳನ್ನು ಏನು ವಿಚ್ಚುಮಾಡಿದ್ದಾರೆ, ಇದರ ಬಗ್ಗೆ ಆಡಿಟ್ ಮಾಡಿಸಿದಂಥ ರೀತಿಯಲ್ಲಿ ಏನಾದರೂ ತಾವು ಆದೇಶ ಕೊಟ್ಟಿದ್ದೀರಾ?

ಶ್ರೀ ಎಂ. ವೀರಪ್ಪಮೊಯಿಲಿ : ಸನ್ಮಾನ್ಯ ಅಧ್ಯಕ್ಷರೆ ಸರಕಾರಕ್ಕೆ ಬರುವ ಯಾವುದೇ ಹಣದ ಒಂದು ವಿಶ್ಲೇಷಣೆ ಅಥವಾ ಪರಿಶೀಲನೆ ಆಡಿಟ್ ಮುಖಾಂತರ ಆಗಬೇಕು, ಆಗುವುದಿಲ್ಲ ಎಂದು ಹೇಳಿದರೆ ನಾವೂ ಒಪ್ಪುವುದಕ್ಕೆ ಆಗುವುದಿಲ್ಲ, ನೀವೂ ಒಪ್ಪುವುದಕ್ಕೆ ಆಗುವುದಿಲ್ಲ.

ಶ್ರೀ ಹೆಚ್. ವಿಶ್ವನಾಥಯ್ಯ : ಈ ರೀತಿ ಪತ್ರ ಬರೆದಿದ್ದಾರೆ.

SRI. M. VEERAPPA MOILY : I will give a full report on it,

ಇವರ ಬಗ್ಗೆ ಏನೆಲ್ಲಾ ವಿಚಾರ ಬಂದಿದೆ, ಇವರ ಬಗ್ಗೆ ನಾನು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೇನೆ ಎಂಬುದನ್ನು ನಾನು ಮಂಗಳವಾರ ಅಥವಾ ಬುಧವಾರ ವಿವರವಾಗಿ ಕೊಡುತ್ತೇನೆ.

ರಾಜ್ಯ ರಸ್ತೆ ಸಾರಿಗೆ ನಿಗಮದ ಪ್ರಯಾಣ ದರಗಳ ಮೇಲೆ ಕೊಲ್ಲಿ ಸುಂಕ ವಿಧಿಸುವ ಬಗ್ಗೆ

704 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಪ್ರಯಾಣ ದರಗಳ ಮೇಲೆ ಕೊಲ್ಲಿ ಸರ್ಚಾರ್ಜ್ ವಿಧಿಸುವ ಆಲೋಚನೆ ಸರ್ಕಾರಕ್ಕಿದೆಯೇ?*

ಆ) *ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು?*

ಇ) *ಯಾವ ಪರಿಮಾಣದಲ್ಲಿ ಮತ್ತು ಎಂದಿನಿಂದ ಅಂತಹ ಕೊಲ್ಲಿ ಸರ್ಚಾರ್ಜ್ ವಿಧಿಸಲಾಗುವುದು?*

ಶ್ರೀ ಅಜೀಜ್ ಸೇತ್ (ಸಾರಿಗೆ ಸಚಿವರು) :

ಅ) ಇದೆ.

ಆ) ಪೆಟ್ರೋಲಿಯಂ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ವಿಧಿಸಲಾಗಿರುವ ರೂ. 25 ಸರ್ಚಾರ್ಜ್‌ನಿಂದ ಉಂಟಾಗಿರುವ ಹೆಚ್ಚುವರಿ ವೆಚ್ಚವನ್ನು ಭರಿಸುವ ಸಲುವಾಗಿ.

ಇ) ಅಂತಿಮ ತೀರ್ಮಾನವನ್ನು ಇನ್ನೂ ಕೈಗೊಂಡಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಅಧ್ಯಕ್ಷರೇ, ಈ ಸರಕಾರದಲ್ಲಿ ಮುಖ್ಯಮಂತ್ರಿಗಳು ಹೇಳಿಕೆ ಒಂದು ರೀತಿ ಇರುತ್ತದೆ. ಸಾರಿಗೆ ಸಚಿವರ ಹೇಳಿಕೆ ಒಂದು ರೀತಿ ಇರುತ್ತದೆ. ನಾವು ಎರಡು ತಿಂಗಳ ಹಿಂದೆ ಅಧಿವೇಶನ ಸೇರಿದ ಸಂದರ್ಭದಲ್ಲಿ ಯಾವುದೇ ಕಾರಣದಿಂದ ರಸ್ತೆ ಸಾರಿಗೆ ಸಂಸ್ಥೆಯ ದರಗಳನ್ನು ಜಾಸ್ತಿ ಮಾಡುವುದಿಲ್ಲ ಎಂಬ ಆಶ್ವಾಸನೆಯನ್ನು ಮಾನ್ಯ ಮುಖ್ಯಮಂತ್ರಿಗಳು ಈ ಸದನಕ್ಕೆ ಕೊಟ್ಟಿದ್ದಾರೆ. ಇವತ್ತು ಮಾನ್ಯ ಸಾರಿಗೆ ಸಚಿವರು ಈ ರೀತಿ ಹೇಳುತ್ತಿದ್ದಾರೆ. ಇವರು ಈ ರೀತಿ ಕರ್ನಾಟಕದ ಜನತೆಗೆ ದೊಡ್ಡ ಪ್ರಹಾರವನ್ನು ಕೊಡುತ್ತಿದ್ದಾರೆ. ಸಾರಿಗೆ ಸಂಸ್ಥೆ ದರಗಳನ್ನು ಜಾಸ್ತಿ ಮಾಡುತ್ತೇವೆ ಎಂಬ ಮಾತನ್ನು ಹೇಳುತ್ತಿದ್ದಾರೆ. ನಾನಾದರೂ ಈ ಸಂದರ್ಭದಲ್ಲಿ ಕೇಳುವುದು ಏನೆಂದರೆ, 6 ತಿಂಗಳ ಹಿಂದೆ 31 ಪರ್ಸೆಂಟ್‌ನಷ್ಟು ದರಗಳನ್ನು ಜಾಸ್ತಿ ಮಾಡಿದ್ದೀರಿ, ಬರಗಾಲದಲ್ಲಿ ರೈತರಿಗೆ ಕುಡಿಯುವ ನೀರು ಕೊಡದೆ, ಕೂಲಿ ಕೊಡದೇ ಈಗ ಮತ್ತೊಂದು ಗದಾಪ್ರಹಾರ ಮಾಡುವುದಕ್ಕೆ ಹೊರಟಿದ್ದೀರಿ.

SRI. AZEEZSAIT : I object, Is it a question or a speech. He is bringing drought, he is bringing water. He must ask a direct question for a direct answer.

MR. SPEAKER : Is it a question? He says it is a question.

ಶ್ರೀ ಪಿ.ಜಿ.ಆರ್. ಸಿಂಧ್ಯ : ಹೋದ ವರ್ಷ ಕೆ.ಇ.ಬಿ., ಕೆ.ಎಸ್.ಆರ್.ಟಿ.ಸಿ. ಟಿಕೆಟ್ ದರಗಳನ್ನು ಜಾಸ್ತಿ ಮಾಡಿ, ಜನತೆಯ ಮೇಲೆ ಒಂದು ಸಾವಿರ ಕೋಟಿ ರೂಪಾಯಿಗಳ ತೆರಿಗೆಗಳನ್ನು ಹಾಕಿ ಅವರ ಸಮಾಧಿ ಮಾಡಿದಿರಿ. ಈ ಫೇರ್ ಗಳನ್ನು ಜಾಸ್ತಿ ಮಾಡಿ ಅವರ ತಿಥಿ ಮಾಡುವುದಕ್ಕೆ ಹೊರಟಿದ್ದೀರಿ. ನಾನು ಮಂತ್ರಿಗಳಿಗೆ ಕೇಳುವುದು, ಕಳೆದ ವರ್ಷ 31 ಪರ್ಸೆಂಟ್ ಜಾಸ್ತಿ ಮಾಡಿದವರಲ್ಲ, ಅವರಲ್ಲಿ ಅಕ್ಯುಯಲ್ ಆಗಿ ಎಷ್ಟು ರಿಯಲೈಸ್ ಆಗಿದೆ. 31 ಪರ್ಸೆಂಟ್ ಆಗಿದೆಯೋ ಅಥವಾ ಅವರಲ್ಲಿ ಎಷ್ಟು ಸೋರಿದೆ ಎಂಬುದನ್ನು ಹೇಳಬೇಕು. ಪೆಟ್ರೋಲ್ ಮತ್ತು